

# ಮದುವೆ ಸಂಭ್ರಮಕ್ಕೆ ತಯಾರಿ ಜೋರು

## ಮೇನಲ್ಲಿ ವೆಡ್ಡಿಂಗ್ ಗಿಫ್ಟ್

ಸೆಟ್ಟೇರಿದಾಗಿನಿಂದಲೂ ತನ್ನ ಟೈಟಲ್, ಕಥಾಹಂದರ ಮತ್ತು ಹೊಸ ಪ್ರಯೋಗದಿಂದ ಸಿನಿಪ್ರಿಯರ ಗಮನ ಸೆಳೆದಿರುವ 'ವೆಡ್ಡಿಂಗ್ ಗಿಫ್ಟ್' ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದೆ. ಸದ್ಯ 'ವೆಡ್ಡಿಂಗ್ ಗಿಫ್ಟ್'ನ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ನಡೆಯುತ್ತಿದ್ದು ಫೆಬ್ರವರಿ ಮೊದಲ ವಾರ ಸಿನಿಮಾದ ಡಬ್ಬಿಂಗ್ ಕಾರ್ಯಗಳೂ ಕೂಡ ಪೂರ್ಣಗೊಂಡಿದೆ. ಇದೀಗ ಚಿತ್ರತಂಡ ಡಿ.ಐ, ವಿಎಫ್‌ಎಕ್ಸ್ ಹಿನ್ನೆಲೆ ಸಂಗೀತ ಸೇರಿದಂತೆ ಪೋಸ್ಟ್ ಪ್ರೊಡಕ್ಷನ್‌ನ ಅಂತಿಮ ಕೆಲಸಗಳು ನಡೆಯುತ್ತಿದ್ದು ಮೇ ಅಂತ್ಯದೊಳಗೆ ಪ್ರೇಕ್ಷಕರ ಮುಂದೆ 'ವೆಡ್ಡಿಂಗ್ ಗಿಫ್ಟ್' ತರುವ ಯೋಚನೆಯಲ್ಲಿದೆ ಚಿತ್ರತಂಡ.

ಸಾಮಾನ್ಯವಾಗಿ ಸಿನಿಮಾದ ಕೆಲಸಗಳು ಅಂದುಕೊಂಡ ಸಮಯಕ್ಕೆ ಮುಗಿಯುವುದು ಕಷ್ಟ ಎಂಬ ಮಾತು ಚಿತ್ರರಂಗದಲ್ಲಿ ಚಾಲ್ತಿಯಲ್ಲಿದೆ. ಅದರಲ್ಲೂ ಕಳೆದ ಎರಡು ವರ್ಷಗಳಿಂದ ಕೋವಿಡ್ ಭಯ, ಅನಿರೀಕ್ಷಿತ ಲಾಕ್ ಡೌನ್ ಆತಂಕ ಹೆಚ್ಚಾಗಿರುವುದರಿಂದ, ಸ್ಟಾರ್ಸ್ ಸಿನಿಮಾ ಅಥವಾ ಹೊಸಬರ ಸಿನಿಮಾಗಳು ಎನ್ನದೆ ಬಹುತೇಕ ಸಿನಿಮಾಗಳ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ಸ್ ಪ್ರಮೋಶನ್ಸ್ ರಿಲೀಸ್ ಹೀಗೆ ಎಲ್ಲ ಶೆಡ್ಯೂಲ್‌ನಲ್ಲೂ ಸಾಕಷ್ಟು ವ್ಯತ್ಯಾಸವಾಗಿದೆ. ಆದರೆ ಇದೆಲ್ಲದರ ನಡುವೆಯೂ 'ವೆಡ್ಡಿಂಗ್ ಗಿಫ್ಟ್' ಸಿನಿಮಾ ಅಂದುಕೊಂಡಂತೆ ನಿಗಧಿತ ಕಾಲಮಿತಿಯೊಳಗೆ ಪ್ರೀ-ಪ್ರೊಡಕ್ಷನ್ಸ್ ಶೂಟಿಂಗ್ ಎಲ್ಲವನ್ನೂ ಮುಗಿಸಿ ಈಗ ಪೋಸ್ಟ್ ಪ್ರೊಡಕ್ಷನ್ಸ್ ಅಂತಿಮ ಹಂತಕ್ಕೆ ತಲುಪಿದೆ.





## ಪಕ್ಕಾ ಪ್ಲಾನಿಂಗ್ ಸಿನಿಮಾ!

'ವಿಕ್ರಂ ಪ್ರಭು ಫಿಲಂಸ್' ಬ್ಯಾನರ್‌ನಲ್ಲಿ ವಿಕ್ರಂ ಪ್ರಭು ನಿರ್ಮಿಸಿ, ನಿರ್ದೇಶಿಸುತ್ತಿರುವ 'ವೆಡ್ಡಿಂಗ್ ಗಿಫ್ಟ್' ಚಿತ್ರದಲ್ಲಿ ಸೋನುಗೌಡ, ನಿಶಾನ್ ನಾಣಯ್ಯ, ಪ್ರೇಮಾ, ಅಚ್ಯುತ ಕುಮಾರ್, ಪವಿತ್ರ ಲೋಕೇಶ್, ಮನುಗೌಡ ಮೊದಲಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 'ವೆಡ್ಡಿಂಗ್ ಗಿಫ್ಟ್' ಸಾಗಿಬಂದ ರೀತಿಯ ಬಗ್ಗೆ ಮಾತನಾಡುವ ನಿರ್ಮಾಕ ಕಂ ನಿರ್ದೇಶಕ ವಿಕ್ರಂ ಪ್ರಭು, 'ಆರಂಭದಿಂದಲೂ ಹೀಗೇ ಸಿನಿಮಾ ಮಾಡಬೇಕು. ತೆರೆಮೇಲೆ ಹೀಗೆ ಸಿನಿಮಾ ಬರಬೇಕು ಎಂಬ ಬಗ್ಗೆ ನಮ್ಮ ತಂಡಕ್ಕೆ ತುಂಬ ಸ್ಪಷ್ಟತೆಯಿತ್ತು. ಪಕ್ಕಾ ಹೋಮ್ ವರ್ಕ್ ನಂತರವೇ ಸಿನಿಮಾದ ಶೂಟಿಂಗ್ ಆರಂಭಿಸಿದ್ದೆವು. ಕೋವಿಡ್ ಭಯ, ಲಾಕ್‌ಡೌನ್ ಆತಂಕವಿದ್ದರೂ, ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡು ಅಂದುಕೊಂಡ ಸಮಯಕ್ಕೆ ಸಿನಿಮಾದ ಶೂಟಿಂಗ್ ಕಂಪ್ಲೀಟ್ ಮಾಡಿದೆವು. ಬೆಂಗಳೂರು, ಮಂಗಳೂರು, ಉಡುಪಿ ಸುತ್ತಮುತ್ತ 37 ದಿನಗಳ ಕಾಲ ಒಂದೇ ಶೆಡ್ಯೂಲ್‌ನಲ್ಲಿ ಶೂಟಿಂಗ್ ಮಾಡಲಾಗಿದೆ. ಡಿ. 30ಕ್ಕೆ ಶೂಟಿಂಗ್ ಮುಗಿಸಿ, ಜ. 15ರಿಂದ ಪೋಸ್ಟ್‌ಪ್ರೊಡಕ್ಷನ್ಸ್ ವರ್ಕ್ ಶುರು ಮಾಡಿದ್ದೇವೆ. ಪಕ್ಕಾ ಪ್ಲಾನಿಂಗ್ ಮತ್ತು ವೃತ್ತಿಪರತೆ ಇಡೀ ತಂಡದಲ್ಲಿದ್ದ ಕಾರಣ ಇದೆಲ್ಲವೂ ಸಾಧ್ಯವಾಯ್ತು' ಎನ್ನುತ್ತಾರೆ.

## ಕರಿ ಕೋಟು ತೊಟ್ಟ ಪ್ರೇಮಾ

ಕನ್ನಡ ಚಿತ್ರರಂಗದಲ್ಲಿ ಸುಮಾರು 70ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಾಯಕಿಯಾಗಿ ಅಭಿನಯಿಸಿ, ತನ್ನದೇ ಆದ ಅಭಿಮಾನಿ ಬಳಗ ಹೊಂದಿರುವ ಪ್ರೇಮಾ ಸುಮಾರು ಮೂರು ವರ್ಷಗಳ ಬಳಿಕ 'ವೆಡ್ಡಿಂಗ್ ಗಿಫ್ಟ್' ಸಿನಿಮಾದ ಮೂಲಕ ಮತ್ತೆ ಬಿಗ್ ಸ್ಕ್ರೀನ್‌ಗೆ ಕಂ ಬ್ಯಾಕ್ ಆಗುತ್ತಿದ್ದಾರೆ. 'ವೆಡ್ಡಿಂಗ್ ಗಿಫ್ಟ್' ಸಿನಿಮಾದಲ್ಲಿ ಪ್ರೇಮಾ ಅವರದ್ದು ಪುರುಷರ ಹಕ್ಕುಗಳ ಪರವಾಗಿ ಹೋರಾಡುವ ಲಾಯರ್ ಪಾತ್ರವಂತೆ. ಇನ್ನೊಂದು ವಿಶೇಷವೆಂದರೆ, ಈ ಸಿನಿಮಾದಲ್ಲಿ ಪ್ರೇಮಾ ಅವರ ಪಾತ್ರಕ್ಕೆ ಅವರೇ ಸ್ವತಃ ಡಬ್ಬಿಂಗ್ ಕೂಡ ಮಾಡಿದ್ದಾರೆ. 'ಪ್ರೇಮಾ ಅವರು ಇಲ್ಲಿಯವರೆಗೆ ಮಾಡಿರುವ ಬಹುತೇಕ ಸಿನಿಮಾಗಳಲ್ಲಿ ಅವರ ಪಾತ್ರಕ್ಕೆ ಸುನೇತ್ರಾ ಪಂಡಿತ್ ಕಂತದಾನ ಕಲಾವಿದೆಯಾಗಿ ಡಬ್ಬಿಂಗ್ ಮಾಡುತ್ತಿದ್ದರು. ಆದರೆ 'ವೆಡ್ಡಿಂಗ್ ಗಿಫ್ಟ್' ಸಿನಿಮಾದಲ್ಲಿ ಅವರ ಪಾತ್ರಕ್ಕೆ ಅವರೇ ಡಬ್ಬಿಂಗ್ ಮಾಡಿದ್ದಾರೆ. ಇದರಿಂದ ಅವರ ಪಾತ್ರದ ತೂಕ ಇನ್ನಷ್ಟು ಹೆಚ್ಚಿದೆ' ಎನ್ನುವುದು ನಿರ್ದೇಶಕ ವಿಕ್ರಂ ಪ್ರಭು ಅವರ ಅಭಿಪ್ರಾಯ.

> ನಮ್ಮ ಸಿನಿಮಾದಲ್ಲಿದ್ದ ಬಹುತೇಕರು ಅನುಭವಿ ಕಲಾವಿದರು. ಆದ್ರೆ, ನಿರ್ದೇಶಕನಾಗಿ ಇದು ನನಗೆ ಮೊದಲ ಅನುಭವ. ನಾನು ಹೊಸಬನಾದ್ರೂ, ಎಲ್ಲ ಕಲಾವಿದರು ಮತ್ತು ತಂತ್ರಜ್ಞರು ತುಂಬ ಸಪೋರ್ಟ್ ಮಾಡಿದ್ದರಿಂದ, ಖುಷಿಯಿಂದ ಕೆಲಸ ಮಾಡಿದ್ದರಿಂದ ಅಂದುಕೊಂಡಂತೆ ಒಂದೊಳ್ಳೆ ಸಿನಿಮಾ ಮಾಡಿ ಮುಗಿಸೋದಕ್ಕೆ ಸಾಧ್ಯವಾಯ್ತು. ಇದೇ ಮಾರ್ಚ್ ವೇಳೆಗೆ 'ವೆಡ್ಡಿಂಗ್ ಗಿಫ್ಟ್' ಆಡಿಯೋ ರಿಲೀಸ್ ಆಗಲಿದ್ದು, ಮೇ ವೇಳೆಗೆ ಸಿನಿಮಾ ರಿಲೀಸ್ ಮಾಡುವ ಯೋಚನೆಯಿದೆ.
>
> ■ ವಿಕ್ರಂ ಪ್ರಭು, 'ವೆಡ್ಡಿಂಗ್ ಗಿಫ್ಟ್' ನಿರ್ಮಾಪಕ ಮತ್ತು ನಿರ್ದೇಶಕ

## ಎನರ್ಜಿಟಿಕ್ ಟೀಮ್

ಇನ್ನು ನಟಿ ಪ್ರೇಮಾ ಅವರಿಗೂ 'ವೆಡ್ಡಿಂಗ್ ಗಿಫ್ಟ್'ನಲ್ಲಿ ಒಂದು ಪಾತ್ರವಾಗಿರುವುದಕ್ಕೆ ಖುಷಿಯಿದೆ. 'ನಾನು ಇಲ್ಲಿಯವರೆಗೆ ಮಾಡಿರದಂಥ ಒಳ್ಳೆಯ ಪಾತ್ರ ಈ ಸಿನಿಮಾದಲ್ಲಿ ಸಿಕ್ಕಿದೆ. ಸ್ಕ್ರಿಪ್ಟ್ ಕೇಳಿದ ಕೂಡಲೇ ಇಷ್ಟವಾಗಿದ್ದರಿಂದ, ಈ ಸಿನಿಮಾ ಒಪ್ಪಿಕೊಂಡೆ. ಇಡೀ ಸ್ಕ್ರಿಪ್ಟ್ ಮತ್ತು ನನ್ನ ಪಾತ್ರ ಎರಡೂ ಆಡಿಯನ್ಸ್‌ಗೆ ತುಂಬ ಕನೆಕ್ಟ್ ಆಗುವಂತಿದೆ. ತಮ್ಮ ಪರವಾಗಿರುವ ಕಾನೂನುಗಳನ್ನು ಕೆಲವು ಮಹಿಳೆಯರು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾರೆ, ಅದರಿಂದ ಏನೇನು ಸಂಕಷ್ಟ ಎದುರಿಸಬೇಕಾಗುತ್ತದೆ ಎಂಬ ಸನ್ನಿವೇಶಗಳ ಸುತ್ತ ನನ್ನ ಪಾತ್ರ ಸಾಗುತ್ತದೆ. ಅಡ್ವೋಕೆಟ್ ಆಗಿ ಕೋರ್ಟ್ ರೂಂ ಡ್ರಾಮಾ ಹೇಗೆಲ್ಲ ನಡೆಯುತ್ತದೆ ಅನ್ನೋದನ್ನ ನಿರ್ದೇಶಕರು ನನ್ನ ಪಾತ್ರದಲ್ಲಿ ತೋರಿಸಿದ್ದಾರೆ. ಹೊಸಬರ ತಂಡವಾದ್ರೂ, ತುಂಬ ಅಚ್ಚುಕಟ್ಟಾಗಿ, ಅಷ್ಟೇ ಪ್ಲಾನಿಂಗ್ ಆಗಿ, ಡಿಸಿಪ್ಲೀನ್ ಆಗಿ ಸಿನಿಮಾದ ಕೆಲಸಗಳನ್ನು ಮುಗಿಸಿದ್ದಾರೆ. ತುಂಬ ಸಮಯದ ನಂತರ ನನ್ನ ಪಾತ್ರಕ್ಕೆ ನಾನೇ ಡಬ್ಬಿಂಗ್ ಮಾಡಿರುವುದಕ್ಕೆ ಇನ್ನಷ್ಟು ಖುಷಿಯಾಗುತ್ತಿದೆ. ನಿರ್ದೇಶಕರು, ಸೌಂಡ್ ಇಂಜಿನಿಯರ್ಸ್ ಎಲ್ಲರೂ ಹುರಿದುಂಬಿಸಿದ್ದರಿಂದ ಇದೆಲ್ಲವೂ ಸಾಧ್ಯವಾಯ್ತು' ಎಂದು ಚಿತ್ರತಂಡದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಪ್ರೇಮಾ. ❖







